# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/ 16 /2020-21 ದಿನಾಂಕ: 22.02.2021

**-:ದಿನಾಂಕ:19-02--2021 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:19.02.2021ರ ಶುಕ್ರವಾರ ಬೆಳಗ್ಗೆ 11.30 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀಮತಿ.ಡಾ//ಕಲ್ಪನಾ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ | ಹಾಜರಿದ್ದರು. |
| 3. | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 5. | ಶ್ರೀ.ವಿನಯ್ | ಬಿಬಿಎಂಪಿ ಕಲ್ಯಾಣ ಇಲಾಖೆ | ಹಾಜರಿದ್ದರು. |
| 6. | ಶ್ರೀ.ಪ್ರಸನ್ನಕುಮಾರ್.ಜಿ.ಎಚ್ | ಬೆಸ್ಕಾಂ ಕೊತ್ತನೂರು | ಹಾಜರಿದ್ದರು. |
| 7. | ಶ್ರೀ. ಎನ್.ಆರ್. ಮುನಿಯಪ್ಪ | AEE. R.I. Mahadevapura | ಹಾಜರಿದ್ದರು. |
| 8. | ಶ್ರೀ.ಟಿ.ಆರ್.ಸತೀಶ್ | ಆರ್.ಡಬ್ಲ್ಯೂ.ಎ. ಅದಯ್ಯಪ್ಪನಗರ | ಹಾಜರಿದ್ದರು. |
| 9. | ಶ್ರೀ.ನಂಜಮಾರಿ | ಜೆ.ಇ. ಬೆಸ್ಕಾಂ ಕೊತ್ತನೂರು | ಹಾಜರಿದ್ದರು. |
| 10. | ಶ್ರೀ.ನರೇಂದ್ರ ಕುಮಾರ್ | ಹೂಡಿ | ಹಾಜರಿದ್ದರು. |
| 11. | ಶ್ರೀಮತಿ.ಶಿಲ್ಪ ಕಶ್ಯೆಪ್ಪ.ಪಿ | ಹೂಡಿ | ಹಾಜರಿದ್ದರು. |
| 12. | ಶ್ರೀ.ಸಿ.ಪಿ ಪಾಟೀಲ್ | ಅಯ್ಯಪ್ಪನಗರ (ಶಕ್ತಿ ಕೇಂದ್ರ) | ಹಾಜರಿದ್ದರು. |
| 13. | ಶ್ರೀ.ಸಂಪಂಗಿರಾಮಯ್ಯ.ಎನ್ | (ಜು.ಇಂ) ಬೆ.ವಿ.ಕಂ. ಅಯ್ಯಪ್ಪನಗರ | ಹಾಜರಿದ್ದರು. |
| 14. | ಶ್ರೀ.ಪ್ರಸಾದ್.ಎಂ | ವಾರ್ಡ್ ಅಧ್ಯಕ್ಷರು ಸಾದರಮಂಗಳ | ಹಾಜರಿದ್ದರು. |
| 15. | ಶ್ರೀ.ಮಹೇಂದ್ರ ಪ್ರಸಾದ್ | ಆರ್.ಡಬ್ಲ್ಯೂ.ಎ. ಕೊಡಿಗೇಹಳ್ಳಿ | ಹಾಜರಿದ್ದರು. |
| 16. | ಶ್ರೀ.ಮಂಜುನಾಥ್ | ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ | ಹಾಜರಿದ್ದರು. |
| 17. | ಶ್ರೀ.ಶ್ರೀನಿವಾಸ್ ರೆಡ್ಡಿ | ಹೂಡಿ | ಹಾಜರಿದ್ದರು. |
| 18. | ಶ್ರೀ.ಸುದರ್ಶನ್ | SWM Sup. | ಹಾಜರಿದ್ದರು. |
| 19. | ಶ್ರೀಮತಿ.ನಾಗರತ್ನ | SWM Sup. | ಹಾಜರಿದ್ದರು. |
| 20. | ಶ್ರೀ.ಆರೋಗ್ಯಸ್ವಾಮಿ | ಆರ್.ಡಬ್ಲ್ಯೂ.ಎ. ಭೈರತಿ | ಹಾಜರಿದ್ದರು. |

| | | | |
|---|---|---|---|
| 21. | ಶ್ರೀ.ಮಹೇಶ್ ಬಾಬು.ಎಚ್.ಎನ್ | ಹೂಡಿ | ಹಾಜರಿದ್ದರು. |
| 22. | ಶ್ರೀ.ನಾರಾಯಣಪ್ಪ. ಎಂ | ಅಯ್ಯಪ್ಪನಗರ 1 ನೇ ಬ್ಲಾಕ್ | ಹಾಜರಿದ್ದರು. |
| 23. | ಶ್ರೀಮತಿ.ಶಾಂತಮ್ಮ.ವಿ | ಕೆ.ಆರ್.ಪುರಂ | ಹಾಜರಿದ್ದರು. |
| 24. | ಶ್ರೀಮತಿ.ಮಂಗಳ | ಹೂಡಿ | ಹಾಜರಿದ್ದರು. |
| 25. | ಶ್ರೀ.ಪಿಳ್ಳಣ್ಣ | ಸ್ಲಂ ಬೋರ್ಡ್ | ಹಾಜರಿದ್ದರು. |
| 26. | ಶ್ರೀ.ವೆಂಕಟೇಶ್ ಕೆ ಆರ್ | ಮಾರ್ಷಲ್ ಹೂಡಿ | ಹಾಜರಿದ್ದರು. |
| 27. | ಶ್ರೀಮತಿ.ಭಾರತಿ.ಕೆ.ಎಸ್ | ಆರ್.ಡಬ್ಲ್ಯೂ.ಎ | ಹಾಜರಿದ್ದರು. |
| 28. | ಶ್ರೀ.ಎನ್.ಆರ್.ವೆಂಕಟರಾಮಪ್ಪ | | ಹಾಜರಿದ್ದರು. |
| 29. | ಶ್ರೀ.ಸುಬ್ರಮಣಿ.ಎನ್ | ಕಾವೇರಿ ನಗರ | ಹಾಜರಿದ್ದರು. |
| 30. | ಶ್ರೀಮತಿ.ಪ್ರೇಮಾ | ಶಕ್ತಿ ಕೇಂದ್ರ | ಹಾಜರಿದ್ದರು. |
| 31. | ಶ್ರೀ.ಪಟೇಂದ್ರಪ್ಪ | ತಿಗಳರಪಾಳ್ಯ | ಹಾಜರಿದ್ದರು. |

**ಸಭೆಯ ನಡುವಳಿಗಳು:-**

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

- ಮೊದಲನೆಯದಾಗಿ ಬೋರ್‌ವೆಲ್‌ಗಳ ಬಗ್ಗೆ ಚರ್ಚಿಸಲು ಅಧ್ಯಕ್ಷರು ಸೂಚಿಸಿದರು.
- ಪ್ರಸಾದ್ ಸಾದರಮಂಗಲ ರವರು ಬೆಳತ್ತೂರು ಕಾಲೋನಿಯಲ್ಲಿನ ಬೋರ್‌ವೆಲ್ ದುರಸ್ಥಿಯಾಗಿದ್ದು ಇದನ್ನು ಸರಿಪಡಿಸಿರುವುದಿಲ್ಲ ಎಂದು ತಿಳಿಸಿದರು.
- ಆರೋಗ್ಯಸ್ವಾಮಿ ಭೈರತಿ ರವರು ವಾಟರ್ ಮ್ಯಾನ್‌ಗಳು ನೀರನ್ನು ಸಮರ್ಪಕವಾಗಿ ಪೂರೈಸುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ.
- ಬಾಬು ಹೂಡಿ ರವರು ಹೂಡಿ ಕರೆಯ ಪಕ್ಕದಲ್ಲಿ ಎರಡು ಬೋರ್‌ವೆಲ್‌ಗಳು ಇದ್ದು ಅವು ಕಾರ್ಯನಿರ್ವಹಿಸುತ್ತಿರುವುದಿಲ್ಲ ಎಂದು ತಿಳಿಸಿದರು.
- ಅದರಂತೆ ಬೋರ್‌ವೆಲ್‌ಗಳ ಗುತ್ತಿಗೆದಾರರಾದ ಶಶಿ ರವರಿಗೆ ಅಧ್ಯಕ್ಷರು ವಾರ್ಡ್‌ನಲ್ಲಿರುವ ಬೋರ್‌ವೆಲ್‌ಗಳ ಒಟ್ಟು ಸಂಖ್ಯೆ ಮತ್ತು ಅವುಗಳ ವಿವರವನ್ನು ನೀಡಬೇಕು ಹಾಗೂ ದುರಸ್ಥಿಗೊಂಡ ಬೋರ್‌ವೆಲ್‌ಗಳನ್ನು ತಕ್ಷಣ ಸಾರ್ವಜನಿಕರಿಗೆ ತೊಂದರೆಯಾಗದಂತೆ ತಕ್ಷಣ ಸರಿಪಡಿಸಿ ಸಾರ್ವಜನಿಕರಿಗೆ ಸಹಕರಿಸಬೇಕು ಎಂದು ಸೂಚಿಸಿದರು ಮತ್ತು ಎರಡು ಮೋಟರ್‌ಗಳ ಸೆಟ್‌ನ್ನು ಹೆಚ್ಚುವರಿಯಾಗಿ ಇಟ್ಟುಕೊಂಡು ಸರಿಪಡಿಸಲು ಸೂಚಿಸಿದರು.
- ಅಯ್ಯಪ್ಪನಗರ ಹೂಡಿ ವ್ಯಾಪ್ತಿಯಲ್ಲಿ ನೀರಿನ ಪೂರೈಕೆ ಕಡಿಮೆಯಿದ್ದರು ಬಿಲ್‌ಗಳು ಹೆಚ್ಚು ಹೆಚ್ಚು ಬರುತ್ತದೆಂದು ಅಯ್ಯಪ್ಪನಗರ ಮಂಜುನಾಥ್, ಶಿಲ್ಪ ಹಾಗೂ ಇನ್ನೂ ಮುಂತಾದವರು ತಿಳಿಸಿದರು.
- ಬಿ.ಡಬ್ಲ್ಯೂ.ಎಸ್,ಎಸ್.ಬಿ, ಗೆ ಸಂಬಂಧಿಸಿದಂತೆ ಮಂಗಳವಾರ ಶಶಿಕುಮಾರ್ ಮೀಟರ್ ರೀಡರ್ ರವರು ಅಯ್ಯಪ್ಪನಗರದಲ್ಲಿ ಬಿಲ್ ಹೆಚ್ಚು ಬರುವ ಮನೆಗಳಿಗೆ ಶಿಲ್ಪ ರವರೊಂದಿಗೆ ಸ್ಥಳ ಪರಿಶೀಲಿಸಿ ತೊಂದರೆಯಾಗುತ್ತಿರುವ ಬಗ್ಗೆ ಮಾಹಿತಿ ನೀಡಲು ಅಧ್ಯಕ್ಷರು ಸೂಚಿಸಿದರು.

- ಆರೋಗ್ಯಸ್ವಾಮಿ ಭೈರತಿ ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ, ವತಿಯಿಂದ ಯು.ಜಿ.ಡಿ ಗೆ ಅಗೆಯುವಾಗ ಕೆಲವು ಮನೆಗಳ Electrical ಲೈನ್‌ಗಳನ್ನು ಕಟ್ ಮಾಡಿರುತ್ತಾರೆ ಅದನ್ನು ಸರಿಪಡಿಸಲು ಕೊರಿದರು.
- ಪಾಟೀಲ್ ಅಯ್ಯಪ್ಪನಗರ ರವರು ಅಯ್ಯಪ್ಪನಗರ 4ನೇ ಬ್ಲಾಕ್ ಗಂಗೊತ್ರಿ ಲೇಔಟ್ ಹಾಗೂ ಗಣೇಶ ದೇವಸ್ಥಾನದ ಬಳಿ ಛೇಂಬರ್‌ಗಳು ಬ್ಲಾಕ್ ಆಗಿದ್ದು ಸರಿಪಡಿಸಲು ಕೊರಿದರು.
- ಇದರ ಬಗ್ಗೆ ಅಧ್ಯಕ್ಷರು ಮುಂದೆ ಬರುವ ಗುರುವಾರ ಬಿ.ಡಬ್ಲ್ಯೂ.ಎಸ್.ಎಸ್.ಬಿ,ಗೆ ನೀರು ಪೂರೈಕೆಗೆ ಸಂಬಂಧಿಸಿದಂತೆ ವಾರ್ಡ್‌ನ ಎಇ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ವಾಟರ್ ಮ್ಯಾನ್, ಮೀಟರ್ ರೀಡರ್ ಹಾಗೂ ಸಂಬಂಧಿಸಿದ ಎಲ್ಲಾ ಅಧಿಕಾರಿ ನೌಕರರು ಸಭೆಯನ್ನು ನಡೆಸುವುದಾಗಿ ಸಭೆಯಲ್ಲಿ ಎಲ್ಲಾ ವಿಷಯಗಳನ್ನು ಚರ್ಚಿಸುವುದಾಗಿ ಸಾರ್ವಜನಿಕರಿಗೆ ಸೂಚಿಸಿದರು.

**Animal Husbandry:-**

- ವಾರ್ಡ್ ವ್ಯಾಪ್ತಿಯಲ್ಲಿನ ಸಾರ್ವಜನಿಕರು ಹಂದಿಗಳ ಸಮಸ್ಯೆ ಬಗೆ ಹರಿಯದಿರುವ ಬಗ್ಗೆ ಗಂಭೀರವಾಗಿ ದೂರು ನೀಡಿರುತ್ತಾರೆ.
- ಅಧ್ಯಕ್ಷರು ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಮುಂದಿನ ಮೀಟಿಂಗ್ ಹೊತ್ತಿಗೆ ಅಯ್ಯಪ್ಪನಗರ ಮತ್ತು ಕೊಡಿಗೆಹಳ್ಳಿ ಈ ವ್ಯಾಪ್ತಿಗಳಲ್ಲಿರುವ ಹಂದಿಗಳನ್ನು ಸಂಪೂರ್ಣವಾಗಿ ಹಿಡಿದು ಮಹಜರ್‌ನೊಂದಿಗೆ ಮಾಹಿತಿ ನೀಡಲು ಸೂಚಿಸಿದರು ಹಾಗೂ ADAH ರವರು ಗುರುವಾರ ನಡೆಯುವ ಸಭೆಗೆ ತಪ್ಪದೆ ಹಾಜರಾಗಲು Veterinary Inspector ರವರಿಗೆ ಸೂಚಿಸಿದರು.

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಬಾಬು ಹೂಡಿ ರವರು ನಮ್ಮ ಹೂಡಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಿಸಲು ಸರಿಯಾಗಿ ಬರುತ್ತಿರುವುದಿಲ್ಲ ಹಾಗೂ ಬ್ಲಾಕ್ ಸ್ಪಾಟ್‌ಗಳನ್ನು ಸರಿಯಾಗಿ ತೆಗೆಯುತ್ತಿರುವುದಿಲ್ಲ ಎಂದು ತಿಳಿಸಿದರು.
- ಅಧ್ಯಕ್ಷರು ಸುದರ್ಶನ್ ಎಸ್.ಡಬ್ಲ್ಯೂ.ಎಂ (supervisor) ರವರಿಗೆ ಸ್ಥಳಕ್ಕೆ ಭೇಟಿ ನೀಡಿ ಈ ರೀತಿ ಅನಾನುಕೂಲವಾಗದಂತೆ ಸರಿಪಡಿಸಲು ಸೂಚಿಸಿದರು.
- ಆರೋಗ್ಯ ಸ್ವಾಮಿ ರವರು ತ್ಯಾಜ್ಯ ಸಂಗ್ರಹಣೆ ಆಟೋಗಳು ಮೈಕ್ ಹಾಕುತ್ತಿರುವುದಿಲ್ಲ ಎಂದು ಸೂಚಿಸಿದರು. ಅಧ್ಯಕ್ಷರು ಸುದರ್ಶನ್ ರವರಿಗೆ ತಕ್ಷಣ ಸರಿಪಡಿಸುವಂತೆ ಸೂಚಿಸಿದರು.
- ನಾರಾಯಣಪ್ಪ ಅಯ್ಯಪ್ಪನಗರ 1ನೇ ಬ್ಲಾಕ್ ರವರು ಒಣತ್ಯಾಜ್ಯಕ್ಕೆ ವಾರಕ್ಕೊಮ್ಮೆ ಬರುತ್ತಿರುತ್ತಾರೆಂದು ತಿಳಿಸಿರುತ್ತಾರೆ.
- ಪೌರಕಾರ್ಮಿಕರು ಅಯ್ಯಪ್ಪನಗರ, ಹಾಗೂ ಹೂಡಿ ವ್ಯಾಪ್ತಿಯ ಒಳರಸ್ತೆಗಳಲ್ಲಿ ಕಸ ಗುಡಿಸುತ್ತಿರುವುದಿಲ್ಲ ಎಂದು ತಿಳಿಸಿದರು.
- ಅದರಂತೆ ಅಧ್ಯಕ್ಷರು ಕಿರಿಯ ಆರೋಗ್ಯ ನಿರೀಕ್ಷಕರಿಗೆ ಬ್ಲಾಕ್‌ವಾರು Schedule ಗಳನ್ನು ಮಾಡಿ ಪೌರಕಾರ್ಮಿಕರು ಕಾರ್ಯ ನಿರ್ವಹಿಸಲು ಸೂಚಿಸಿದರು.

**ವಿದ್ಯುತ್:-**

- ಪಾಟೀಲ್ ಅಯ್ಯಪ್ಪನಗರ ರವರು Voltage ಆಗಾಗ Drop ಆಗುತ್ತಿರುತ್ತದೆ ಎಂದು ತಿಳಿಸಿದರು. ಅಧ್ಯಕ್ಷರು ಎಇ ಬೆಸ್ಕಾಂ ರವರಿಗೆ ಸರಿಪಡಿಸಲು ಸೂಚಿಸಿದರು.

**ಪೋಲಿಸ್ ಇಲಾಖೆ:-**

- ಟ್ರಾಫಿಕ್ ಪೋಲಿಸ್ ಇಲಾಖೆಗೆ ಸಂಬಂಧಿಸಿದಂತೆ ಹೂಡಿ Flyover ನ Under-pass ನಲ್ಲಿ ಕಾಮಗಾರಿ ಇಲಾಖೆಯಿಂದ ಕಾರ್ಯನಿರ್ವಹಿಸುತ್ತಿದ್ದು ಟ್ರಾಫಿಕ್ ಸೂದಾರಿಸಲು ಟ್ರಾಫಿಕ್ ಇನ್ಸ್‌ಪೆಕ್ಟರ್ ರವರಿಗೆ Major Road AEರವರು ಕೋರಿದರು. ಹಾಗೂ Foot path ನಲ್ಲಿ ತಳ್ಳುವ ಗಾಡಿಗಳು ಇಟ್ಟು ರಸ್ತೆಯಲ್ಲಿನ ವಾಹನ ಸವಾರರಿಗೆ ತೊಂದರೆಯಾಗುತ್ತದೆ ಎಂದು ಸಾರ್ವಜನಿಕರು ತಿಳಿಸಿದರು.
- ಅಧ್ಯಕ್ಷರು ಮುಂದಿನ ವಾರದಲ್ಲಿ ಒಂದು ದಿನ ಪೂಟ್‌ಪಾತ್ ತೆರವು ಕಾರ್ಯಚರಣೆ ನಡೆಸಲು ಅಧ್ಯಕ್ಷರು ಸೂಚಿಸಿದರು. ಪ್ರತಿ 10 ದಿನಕ್ಕೊಮ್ಮೆ ಪಾದಾಚಾರಿ ಮಾರ್ಗ ತೆರವು ಕಾರ್ಯಚರಣೆಯನ್ನು ಆರೋಗ್ಯ ಇಲಾಖೆ, ಕಾಮಗಾರಿ ಇಲಾಖೆಯಿಂದ ನಿರ್ವಹಿಸುವುದು.

**ಬಿಬಿಎಂಪಿ ಕಲ್ಯಾಣ ಶಾಖೆಗೆ ಸಂಬಂಧಿಸಿದಂತೆ**

- ಶ್ರೀ ವಿನಯ್ಯ ರವರು ಕಲ್ಯಾಣ ಇಲಾಖೆಯಲ್ಲಿ ಇರುವ ಅನುಕೂಲಗಳ ಬಗ್ಗೆ ತಿಳಿಸಿದರು. ಹಾಗೂ ಸಾರ್ವಜನಿಕರು ಇದರ ಪ್ರಯೋಜನೆಗಳನ್ನು ಪಡೆದುಕೊಳ್ಳಲು ಕೋರಿದರು.

**ಕಾಮಗಾರಿ ಇಲಾಖೆ:-**

- ಬಾಬು ಹೂಡಿರವರು ಹೂಡಿ ಸರ್ಕಲ್ ನಿಂದ ಹೂಡಿ Flyover ನ ರಸ್ತೆಯ ಎಡಬದಿಯ ಚರಂಡಿಯಲ್ಲಿನ ಹೂಳು ತೆಗೆಯಲು ಕೋರಿರುತ್ತಾರೆ.
- ಎಇ ಮುನಿಯಪ್ಪ ರವರು ಒಂದು ಬದಿಯಲ್ಲಿ ಕಾರ್ಯ ಮುಕ್ತಾಯಗೊಂಡಿದ್ದು ರಸ್ತೆಯ ಎಡಭಾಗದಲ್ಲಿನ ಕಾರ್ಯ ಮುಂದಿನ ದಿನಗಳಲ್ಲಿ ಮುಗಿಸುವುದಾಗಿ ಹಾಗೂ ಚರಂಡಿ ಅಗಲಮಾಡಬೇಕಾಗಿರುವುದರಿಂದ ಸ್ವಲ್ಪ ತಡವಾಗಿರುತ್ತದೆ ನಂತರದ ದಿನಗಳಲ್ಲಿ ಈ ಕಾರ್ಯ ಮುಗಿಸುವುದಾಗಿ ತಿಳಿಸಿದರು.
- ನಾರಾಯಣಪ್ಪ ರವರು 1ನೇ ಬ್ಲಾಕ್ ಅಯ್ಯಪ್ಪನಗರ ಇಲ್ಲಿ ಚರಂಡಿ ಸ್ವಚ್ಚತೆಯನ್ನು ಮಾಡುತ್ತಿದ್ದು ಮಣ್ಣು ತೆಗೆಯುತ್ತಿರುತ್ತಾರೆ ಆದರೆ ಅವಶ್ಯಕತೆ ಹೆಚ್ಚಿರುವ ಕಡೆ ಮೊದಲು ತೆಗೆಯಬೇಕೆಂದು ಕೋರಿರುತ್ತಾರೆ.
- ಪಾಟೀಲ್ ಅಯ್ಯಪ್ಪನಗರ ಹಾಗೂ ಸತೀಶ್ ಅಯ್ಯಪ್ಪನಗರ ರವರು Silt & Tractor ರವರು ನಮ್ಮ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಎಂದು ತಿಳಿಸಿದರು.

**2021-22 ರ ಆಯವ್ಯಯದ ಬಗ್ಗೆ ಚರ್ಚಿಸುವುದು.**

- ಮಾನ್ಯ ಆಡಳಿತಗಾರರು ಬಿಬಿಎಂಪಿ ರವರ ಆದೇಶದಂತೆ 2021-22 ರ ಆಯವ್ಯಯದ ಬಗ್ಗೆ ಚರ್ಚಿಸಲು ಸೂಚಿಸಿರುತ್ತಾರೆ. ಅದರಂತೆ ಸಭೆಯಲ್ಲಿ ಅಯವ್ಯಯಕ್ಕೆ ಸಂಬಂಧಿಸಿದಂತೆ ಸುಧೀರ್ಘವಾಗಿ ಚರ್ಚಿಸಲಾಗಿ ಹಾಗೂ ಈ ಕೆಳಕಂಡ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಅಧಿಕ ಮೊತ್ತವನ್ನು 2021-22 ರ ಅಯವ್ಯಯದಲ್ಲಿ ಸೇರಿಸಲು ಕೋರಲಾಗಿದೆ.

| ಕ್ರಂ.ಸಂ | ಕಾಮಗಾರಿಯ ಹೆಸರು | ಮೊತ್ತ (ಲಕ್ಷಗಳು) | ಷರಾ |
|---|---|---|---|
| 1 | ಹೂಡಿ ವಾರ್ಡ್‌ನಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ನಿರ್ವಹಿಸಲು ಡ್ರೈ ವೇಸ್ಟ್ ಸೆಂಟರ್ ನಿರ್ಮಿಸಲು | 30.00 | |
| 2 | 1ನೇ ಬ್ಲಾಕ್ ಅಯ್ಯಪ್ಪನಗರ ಈ ವ್ಯಾಪ್ತಿಯಲ್ಲಿ ಎರಡು RO Plant ನಿರ್ಮಿಸಲು | 30.00 | |
| 3 | ಭೈರತಿ ಭಾಗದಲ್ಲಿ ನೀರಿನ ಸಮಸ್ಯೆ ನಿವಾರಣೆಗೆ ಬೋರ್‌ವೆಲ್ ಕೊರೆಸಲು | 30.00 | |
| 4 | ಭೈರತಿ ಭಾಗದಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು | 20.00 | |
| 5 | ಹೂಡಿ ವ್ಯಾಪ್ತಿಯಲ್ಲಿ ಲೈಬ್ರೆರಿ ನಿರ್ಮಿಸಲು | 30.00 | |
| 6 | ಅಯ್ಯಪ್ಪನಗರ ವ್ಯಾಪ್ತಿಯಲ್ಲಿ ಹೊಸದಾಗಿ ಚರಂಡಿಗಳನ್ನು ನಿರ್ಮಿಸಲು | 60.00 | |
| | ಒಟ್ಟು | 200.00 | |

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

Covid-19 Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೊಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ-54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ